ಪಿಡಬ್ಲ್ಯೂ-1

ಇಂದು ದಿ. 17-07-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನ್ಯಾಯಾಲಯಕ್ಕೆ ನಮಗೆ ಸಂಬಂಧಿಸಿದ ಓಬಳಾಪುರ ಗ್ರಾಮದ ಸರ್ವೆ ನಂ.5/2, 5/4 ಮತ್ತು 5/5 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ರಿಂದ 3 ಎಂದು, ಸದರಿ ಪಹಣಿಗಳು ಈಗ ನನ್ನ ತಂದೆ ಶಿವಬಸಪ್ಪರವರ ಹೆಸರಿನಲ್ಲಿ ಇರುತ್ತದೆ. ನಾನು ನನ್ನ ತಂದೆಯ ಮರಣ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.4 ಎಂದು ಹಾಗೂ ಉಪನೋಂದಣಾಧಿಕಾರಿಗಳು ಜಗಳೂರು ಇವರು ನೀಡಿದ ಮಾರುಕಟ್ಟೆ ಮೌಲ್ಯ ದರ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಈ ದಾಖಲೆಗಳನ್ನು ಪರಿಗಣಿಸಿ ನಾನು ಅರ್ಜಿಯಲ್ಲಿ ಕೋರಿಕೊಂಡ ಪರಿಹಾರವನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

**ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದಃ**

ನಮ್ಮ ಜಮೀನಿನಲ್ಲಿ 2014 ರಲ್ಲಿ ಲೈನ್ ಎಳೆಯಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಕಂಪನಿಯವರು ನಮ್ಮ ಮನೆಗೆ ಬಂದು ದುಡ್ಡು ಕೊಟ್ಟು ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಆದರೆ ನನ್ನ ತಂದೆಗೆ ತಿಳಿದಿರುತ್ತದೆ. 2014 ರಲ್ಲಿ ಜಮೀನನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ವ್ಯವಹಾರ ನನ್ನ ತಂದೆಗೆ ಮಾತ್ರ ತಿಳಿದಿರುತ್ತದೆ ಎಂದರೆ ಸರಿ. ಆ ರೀತಿ ದುಡ್ಡು ಕೊಟ್ಟು ನಾವು ಸಹಿ ಹಾಕಿದ ಬಳಿಕವೇ ಲೈನ್ ಎಳೆಯಲು ನಾವು ಅವಕಾಶ ಕೊಟ್ಟಿರುತ್ತೇವೆ ಎಂದರೆ ನನಗೆ ತಿಳಿದಿರುವುದಿಲ್ಲ. ನಮ್ಮ ಜಮೀನಿನಲ್ಲಿ ಮಳೆ ಬಂದಾಗ ಮಾತ್ರ ಬೆಳೆ ಬೆಳೆಯಲಾಗುತ್ತದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಯಾವುದೇ ಮರ ಇರಲಿಲ್ಲ ಎಂದರೆ ಸರಿಯಲ್ಲ. ಆದರೆ ಮರ ಕಡಿದಿರುವುದಿಲ್ಲ ಎಂದರೆ ಸಾಕ್ಷಿಯು ಎರಡು ಬೇವಿನ ಮರ ಕಡಿದಿದ್ದರು ಎಂದು ನುಡಿದಿರುತ್ತಾರೆ. ನನ್ನ ಜಮೀನಿನಲ್ಲಿ 6 ಮೀಟರ್ ಅಗಲದ ವಿಸ್ತೀರ್ಣದ ಲೈನನ್ನು ಎಳೆಯಲಾಗಿದೆ ಎಂದರೆ ಸರಿಯಲ್ಲ. ಕಂಪನಿಯವರು ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಆಗಿನ ಮೌಲ್ಯಕ್ಕೆ ಸರಿಯಾಗಿ ಹಣವನ್ನು ನೀಡಿ ನಮ್ಮ ಒಪ್ಪಿಗೆಯನ್ನು ಪಡೆದುಕೊಂಡು ನಂತರ ಲೈನನ್ನು ಎಳೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಕಂಬ ಇರುತ್ತದೆ. ನನ್ನ ಅರ್ಜಿಯಲ್ಲಿ ಬಲತ್ಕಾರದಿಂದ ಕಂಪನಿಯವರು ನನ್ನ ಜಮೀನಿನಲ್ಲಿ ಲೈನ್ ಎಳೆದಿದ್ದಾರೆ ಎಂದು ನಾನು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2018 ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ.

ನನ್ನ ಜಮೀನಿನಲ್ಲಿ ಲೈನ್ ಎಳೆಯುವ ಪೂರ್ವದಲ್ಲಿ ಹಣ ನೀಡಿ ನಂತರ ಕಾಗದ ಪತ್ರಿಕೆಗಳಲ್ಲಿ ನಮ್ಮ ಸಹಿಗಳನ್ನು ಪಡೆದು ನಂತರ ಒಪ್ಪಿಗೆ ಪಡೆದು ಲೈನ್ ಎಳೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಒಂದು ಕಂಬ ಇರುವುದಿಲ್ಲ. ನಮ್ಮ ಬೆಳೆ ನಾಶ ಆದ ಕುರಿತಾಗಿ ಹಣ ನೀಡುವಾಗ ದಾಖಲೆಗೆ ನನ್ನ ತಂದೆಯ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೆದರಿಸಿ ಸಹಿ ಪಡೆದಿದ್ದಾರೆ ಎಂದು ನುಡಿದಿರುತ್ತಾರೆ. ಆ ಕುರಿತು ನಾನು ಅಥವಾ ನಮ್ಮ ಮನೆಯವರು ಪೋಲೀಸರಿಗೆ ಅಥವಾ ತಹಶೀಲ್ದಾರರಿಗೆ ದೂರು ನೀಡಿಲ್ಲ ಎಂದರೆ ಸರಿ. ಕಂಪನಿಯವರು ಸರಿಯಾದ ರೀತಿಯಲ್ಲಿ ಮೌಲ್ಯಮಾಪನ ಮಾಡಿ ಹಣ ನೀಡಿದ್ದು, ಅದನ್ನು ನನ್ನ ತಂದೆ ಪಡೆದುಕೊಂಡಿದ್ದರೂ ಕೂಡ ಈ ಹಂತದಲ್ಲಿ ಕಂಪನಿಯವರು ಬೆದರಿಸಿ ನನ್ನ ತಂದೆಯ ಸಹಿ ಪಡೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಿಂದ 3 ರಲ್ಲಿ ಈವರೆಗೆ ನನ್ನ ತಂದೆಯ ಹೆಸರೇ ಇರುತ್ತದೆ. ನನ್ನ ತಂದೆ ತೀರಿಕೊಂಡು ಮೂರು ವರ್ಷವಾಗಿದ್ದು, ಈವರೆಗೆ ನನ್ನ ಹೆಸರು ನಿ.ಪಿ.1 ರಿಂದ 3 ರಲ್ಲಿ ಬಂದಿರುವುದಿಲ್ಲ ಎಂದರೆ ಸರಿ. ನಾನು ನಿ.ಪಿ.1 ರಿಂದ 3 ನ್ನು ಹೊರತುಪಡಿಸಿ ಜಮೀನಿನ ಮಾಲೀಕ ನಾನು ಎಂದು ತೋರಿಸುವ ಬೇರೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಸುಳ್ಳು ಸಂಗತಿಯ ಪ್ರಕರಣ ದಾಖಲಿಸಿದ್ದು, ಯಾವುದೇ ಪರಿಹಾರ ಪಡೆಯಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ.1 ರಿಂದ 3 ರ ಮಾಲೀಕನಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.07.17 13:52:11 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.